ನಾವೆಲ್ಲರೂ ಹೆಮ್ಮೆ ಪಡಬೇಕು. ಆದ್ದರಿಂದ ಈ ಕುರಿತು ಇನ್ನು ಚರ್ಚೆ ಮಾಡುವುದನ್ನು ಬಿಡಿ. ಈ ವಿಚಾರವನ್ನು ಚರ್ಚಿಸಿ ಒಂದು ತೀರ್ಮಾನಕ್ಕೆ ಬಂದ ಬಗ್ಗೆ ಸಂತೋಷಪಟ್ಟುಕೊಳ್ಳೋಣ. ಈಗ ಮಾನ್ಯ ಯಡಿಯೂರಪ್ಪನವರು ಕೊಟ್ಟ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳುತ್ತೀರಾ? ಅವಕಾಶ ಮಾಡಿಕೊಡುತ್ತೇನೆ.

(ಆ) ವಿಷಯ ಗ್ರಾಮಪಂಚಾಯತ್ ಚುನಾವಣೆಗಳನ್ನು ಮುಂದೂಡಿಯವ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) :— ಮಾನ್ಯ ಅಧ್ಯಕ್ಷರೇ, ಗ್ರಾಮಪಂಚಾಯತ್ ಚುನಾವಣೆಗಳನ್ನು ಸರಕಾರದವರು ಮುಂದೂಡಿರುವಂಥ ಪ್ರಮುಖವಾದ ವಿಚಾರವನ್ನು ನಾವು ಇಲ್ಲಿ ನಿಲುವಳಿ ಸೂಚನೆಯ ಮೂಲಕ ಪ್ರಸ್ತಾಪಕ್ಕೆ ತಂದಾಗ... ತಾವುಗಳು ಇವೊತ್ತು ಅವಕಾಶವನ್ನು ನೀಡಿ ಮಾತನಾಡಿ ಎಂದು ಹೇಳಿದರೆ ನಾನು ಪ್ರಾರಂಭ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :— ನಾವು ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಲು ಕೋರಿದ್ದೇವೆ. ಅದನ್ನು ಅರ್ಧಗಂಟೆ ಕಾಲಾವಧಿಯ ವಿಚಾರವನ್ನಾಗಿಯೋ, ಇನ್ನಾವುದೇ ನಿಯಮಗಳಡಿಯಲ್ಲಿಯೋ ತಾವುಗಳು ಆದೇಶಿಸಿದಂತೆ ಚರ್ಚಿಸಲು ನಾವು ಸಿದ್ಧರಿದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್ (ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ವಾರ್ತಾ ಹಾಗೂ ಪ್ರವಾಸೋದ್ಯಮ ಸಚಿವರು) :— ಮಾನ್ಯ ಅಧ್ಯಕ್ಷರೇ, ಈ ವಿಚಾರವನ್ನು ಈ ರೂಪದಲ್ಲಿ ತರತಕ್ಕುದಾದ್ದರಲ್ಲಿ ಸ್ವಲ್ಪ ತೊಂದರೆಗಳು ಇವೆ. ಇಲ್ಲಿ ಉತ್ತರ ಕೊಡಲು ಸರಕಾರವು ಹಿಂಜರಿಯುವ ಪ್ರಶ್ನೆ ಇಲ್ಲ. ಕಾನೂನಿನ ಪ್ರಕಾರವೇ ಒಂದೇ ದಿವಸದಲ್ಲಿ ಮೋಷನ್‌ಗಳನ್ನು ತರಲು ಆಗುವುದಿಲ್ಲ.

ಅಧ್ಯಕ್ಷರು :— ನಾನು ಇದನ್ನು ನಿಲುವಳಿ ಸೂಚನೆ ಅಡಿಯಲ್ಲಿ ತೆಗೆದುಕೊಂಡಿಲ್ಲ. ವಸತಿ ಚರ್ಚೆ ನಡೆದದ್ದೂ ನಿಲುವಳಿ ಸೂಚನೆ ಕೆಳಗಲ್ಲ.

ಶ್ರೀ ಎಂ.ಪಿ. ಪ್ರಕಾಶ್ :— ಅದು ನಿಲುವಳಿ ಸೂಚನೆ ಕೆಳಗಿದೆ ಎಂದು ಭಾವಿಸಿಕೊಂಡು ಈ ತಾಂತ್ರಿಕ ಆಕ್ಷೇಪಣೆ ನಾನು ಎತ್ತಿದ್ದೆ. ಒಂದು ವೇಳೆ ಅದಿಲ್ಲದಿದ್ದರೂ ಎರಡನೆಯದು ಬಹಳ ಮುಖ್ಯವಾದುದು ಇದರ ಬಗ್ಗೆ ಕೋರ್ಟಿನಲ್ಲಿ ಆಗಲೇ ಎರಡೂ ಕಡೆಯಿಂದ ವಾದಗಳು ನಡೆದಿವೆ.

ಶ್ರೀ ಕೆ.ಎಸ್. ಈಶ್ವರಪ್ಪ :— ಮಾಡಬಾರದ್ದೆಲ್ಲಾ ಮಾಡಿ ಈಗ ಹೀಗೆ ಹೇಳುವುದು ಬೇಡ; ನೀವು ಉತ್ತರಿಸುವಾಗ ಏನೆಲ್ಲಾ ಬೇಕೋ ಹೇಳಿ.

(ಮುಂದಲ)

ಅಧ್ಯಕ್ಷರು:— ಪ್ರಕಾಶ್‌ರವರೇ, ಒಂದು ನಿಮಿಷ ಕೂತುಕೊಳ್ಳಿ. ಅವರು ಬೆಳಿಗ್ಗೇನೇ ಇದನ್ನು ನಿಲುವಳಿ ಸೂಚನೆ ಮೇಲೆ ತೆಗೆದುಕೊಳ್ಳಬೇಕೆಂದು ನನಗೆ ನೋಟೀಸ್ ಕೊಟ್ಟಿದ್ದರು. ನಾನು ಅವರಲ್ಲಿ ವಿನಂತಿ ಮಾಡಿಕೊಂಡೆ ಮಾನ್ಯ ವಿರೋಧಪಕ್ಷದ ನಾಯಕರೂ ಇಂಥಾದ್ದೇ ಒಂದು ಕೊಟ್ಟಿದ್ದಾರೆ. ಇವೆರಡನ್ನೂ ನಾನು ನಿಲುವಳಿ ಸೂಚನೆ ಕೆಳಗೆ ತೆಗೆದುಕೊಳ್ಳುವುದು ಬೇಡ. ಆದರೆ ಸಾಕಷ್ಟು ಸಾರ್ವಜನಿಕ ಮಹತ್ವದ ವಿಷಯ ಇರುವುದರಿಂದ ಈ ದಿವಸವೇ ಚರ್ಚೆಗೆ ತೆಗೆದುಕೊಳ್ಳಲು ಸಿದ್ಧ. ಅನಿರೀಕ್ಷಿತವಾಗಿ ಮೊದಲನೇ ವಿಚಾರ ಬಹಳ ಸಮಯ ತೆಗೆದುಕೊಂಡಿದೆ. ಯಡಿಯೂರಪ್ಪನವರು ಆಗಲೇ ನನ್ನ ಬಳಿ ಬಂದು ಏನು ಹೇಳಿದರು ಅಂದರೆ ಒಂದು ವಿಚಾರ ಪ್ರಸ್ತಾಪವಾಗಿದೆ, ಸಾರ್ವಜನಿಕ ಮಹತ್ವ ಇರುವುದರಿಂದ ಇದು ಅಷ್ಟು ಪ್ರಚಾರ ಪಡೆದುಕೊಳ್ಳುವುದಿಲ್ಲ. ಬೇಕಾದರೆ ನಾಳೆ ತೆಗೆದುಕೊಳ್ಳಿ ಇದನ್ನು: ನೀವು ಒತ್ತಾಯ ಮಾಡಿದರೆ ಇವತ್ತಿಗೇ ನಾವೆಲ್ಲಾ ಸಿದ್ಧರಿದ್ದೇವೆ ಎಂದು ಹೇಳಿದರು. ಈಗ ಅವರ ಆಕ್ಷೇಪ ಏನೆಂದರೆ ನಾವು ಮಾದವನ್ನೇ ಮಂಡಿಸಿಲ್ಲ. ಸಚಿವರು ಅದನ್ನು ಪ್ರಿಎಂಪ್ಟ್ ಮಾಡುವುದು ಸಾಧುವಲ್ಲ. I also believe in it. Let them have their say. ಆಮೇಲೆ You can always raise objection. I will be guided by the rules.

ಶ್ರೀ ಎಂ.ಪಿ. ಪ್ರಕಾಶ್:— ನಾನು ಅವರು ಆಗಲೇ ಪ್ರಸ್ತಾಪಿಸಿದ್ದಾರೆ ಎಂದು ಭಾವಿಸಿಕೊಂಡಿದ್ದೆ

ಅಧ್ಯಕ್ಷರು:— ಇಲ್ಲ, ಈಗ ಯಡಿಯೂರಪ್ಪನವರ ಸೂಚನೆ ನಾಳೆ ತೆಗೆದುಕೊಳ್ಳೋಣ. ಈಗ ಮಾನ್ಯ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಚರ್ಚೆ ಆರಂಭ. ಶಿವರಾಮೇಗೌಡರು ಸೂಚನೆ ಮಾಡುವರು.

(9) ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟ ವಂದನಾರ್ಪಣೆ ಪ್ರಸ್ತಾಪ:

+ಶ್ರೀ ಮಾಟಾಳ್ ನಾಗರಾಜ್:— ಅಧ್ಯಕ್ಷರೇ, ಶಿವರಾಮೇಗೌಡರು ಯಾವ ಪಕ್ಷದವರು? ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಸಾಮಾನ್ಯವಾಗಿ ಆಳುವ ಪಕ್ಷದ ಸದಸ್ಯರು ಪ್ರಾರಂಭ ಮಾಡಬೇಕು. ಅವರು ಆಳುವ ಪಕ್ಷವೇ ಅಲ್ಲವೇ ಎಂಬುದನ್ನು ತೀರ್ಮಾನವಾಗಬೇಕು.

ಅಧ್ಯಕ್ಷರು:— ಸಂವಿಧಾನದಲ್ಲಿ ಆಳುವ ಪಕ್ಷವನ್ನೂ ಮೊದಲ್ಗೊಂಡು ವಿರೋಧಪಕ್ಷವನ್ನು ಮೊದಲ್ಗೊಂಡು ಯಾವ ಪಕ್ಷವನ್ನೂ ಪರಿಗಣನೆಗೆ ತೆಗೆದುಕೊಂಡಿಲ್ಲ. ನೀವೆಲ್ಲರೂ ಆಯಾ ವಿಧಾನಸಭಾ ಕ್ಷೇತ್ರಗಳಿಂದ ಚುನಾಯಿತರಾಗಿ ಬಂದಿರತಕ್ಕ ಸದಸ್ಯರು.